

## ಅತಿ ಬುದ್ಧಿವಂತಿಕೆ!

ಗೋಪಿ ಕಾರ್ಖಾನೆಯ ಬಾಗಿಲ ಬಳಿ ಏನೂ ಮಾಡದೆ ಸುಮ್ಮನೆ ನಿಂತಿದ್ದ. ಅಲ್ಲಿಂದ ಹಾದು ಹೋಗುತ್ತಿದ್ದ ಸಂಸ್ಥೆಯ ಸಿ.ಇ.ಒ. ಈತನನ್ನು ಗಮನಿಸಿ, 'ನಿನ್ನ ಸಂಬಳವೆಷ್ಟು?' ಎಂದು ವಿಚಾರಿಸಿದರು. ಗೋಪಿ 'ಐದು ಸಾವಿರ ರೂಪಾಯಿ' ಎಂದ.

ತಕ್ಷಣ ಅವರು ತಮ್ಮ ಪರ್ಸ್‌ನಿಂದ ಹದಿನೈದು ಸಾವಿರ ರೂಪಾಯಿ ತೆಗೆದು ಆತನ ಕೈಯಲಿಟ್ಟು, 'ಇದರಲ್ಲಿ ನಿನ್ನ ಮೂರು ತಿಂಗಳ ಸಂಬಳವಿದೆ. ಇದನ್ನು ತೆಗೆದುಕೊಂಡು ಹೋಗು, ನಾಳೆಯಿಂದ ಕೆಲಸಕ್ಕೆ ಬರಬೇಡ' ಎಂದು ನೇರ ತಮ್ಮ ಕ್ಯಾಬಿನ್‌ಗೆ ಬಂದರು. ನಂತರ ಪರ್ಸನಲ್ ಮ್ಯಾನೇಜರನ್ನು ಕರೆದು, 'ಯಾರು ಆ ಸೋಮಾರಿ, ಅವನ ಫೈಲ್ ಕ್ಲೋಸ್ ಮಾಡಿ' ಎಂದು ಅಜ್ಞಾಪಿಸಿದರು. 'ಆತ ನಮ್ಮ ಸಂಸ್ಥೆಯ ನೌಕರನಲ್ಲ, ಪಿಜ್ಜಾ ಡೆಲಿವರಿ ಮಾಡುವ ಹುಡುಗ ಸರ್...' ಎನ್ನುತ್ತಾ ಪರ್ಸನಲ್ ಮ್ಯಾನೇಜರ್ ಹೊರ ನಡೆದರು.

**ರಮಣ್ ಶೆಟ್ಟಿ ರೆಂಜಾಳ್**

## ದಾಡಿ

ಇತ್ತೀಚೆಗೆ ಸಲೂನ್‌ನವರು ಎಲ್ಲಾ ಸೇವೆಗಳ ದರವನ್ನು ಹೆಚ್ಚಿಸಿರುವ ಕಾರಣ, ತಿಪ್ಪೇಶಿ ಮನೆಯಲ್ಲಿಯೇ ದಾಡಿ ಮಾಡಿಕೊಂಡು ಹೇರ್ ಕಟಿಂಗ್‌ಗಾಗಿ ಸಲೂನ್‌ಗೆ ಬಂದ. ಹೇರ್ ಕಟಿಂಗ್ ಶುರುವಾಯ್ತು. 'ಈ ಮೊದಲು ಇಲ್ಲೊಬ್ಬ ಹೇರ್ ಕಟಿಂಗ್ ಮಾಡುತ್ತಿದ್ದನಲ್ಲ, ಅವನೆಲ್ಲಿ?' ಎಂದು ಕೇಳಿದ ತಿಪ್ಪೇಶಿ. 'ಅವನೀಗ ಜೈಲಿನಲ್ಲಿದ್ದಾನೆ, ಅವನಿಗೆ ಆರು ತಿಂಗಳು ಶಿಕ್ಷೆಯಾಗಿದೆ' ಎಂದ ಸಲೂನ್‌ನವ. 'ಯಾಕೆ?' ಕೇಳಿದ ತಿಪ್ಪೇಶಿ. 'ಒಬ್ಬ ಗಿರಾಕಿ ಹೇರ್ ಕಟಿಂಗ್ ಮಾಡಿಸಿಕೊಂಡ ಬಳಿಕ ದಾಡಿ ಮಾಡುವುದು ಬೇಡ ಅಂದ. ಇವನು ಮುಂಗೋಪಿ! ಗಿರಾಕಿಯ ಕಿವಿ ಕೊಯ್ದು ಬಿಟ್ಟ.' ಕಟಿಂಗ್ ಮುಗಿದ ಬಳಿಕ ಕ್ಷೌರಿಕ ಕೇಳಿದ, 'ದಾಡಿ ಮಾಡಲಾ ಸಾರ್?' ತಿಪ್ಪೇಶಿ ತನ್ನ ಕಿವಿ ಮುಟ್ಟಿಕೊಳ್ಳುತ್ತ ಹೇಳಿದ 'ಮಾಡಿ ಮಾಡಿ...'



**ಕೆ.ಜಿ. ಭದ್ರಣ್ಣವರ**